ನನ್ನ ಕೊರಳ ಸ್ವರಕೆ ನಿಮ್ಮ ಧ್ವನಿಯ

ನನ್ನ ಕೊರಳ ಸ್ವರಕೆ ನಿಮ್ಮ ಧ್ವನಿಯ ತುಂಬಿ ಹಾಡುವೆ। ಏಸು ನಿಮ್ಮ ನಾಮವನ್ನು ಸಪ್ತ ಸ್ವರದಿ ಬೆರಸುವೆ।।ನನ್ನ।। ದೀನ ದಲಿತ ಮನೆಯ ಮಾತೆಯುದರದಿಂದ ಜನಿಸುವೆ। ಜಗದ ಶಾಂತಿಗಾಗಿ ನೀವು। ಪರರ ಹಿತದಿ ನಿನ್ನ ಒಳಿತು ಎಂದು ಜಗಕೆ ಸಾರುವೆ। ಶಾಪದಲ್ಲಿ ನೀವು ಅಲ್ಲಿ ಸ್ವರ್ಗ ದಾರಿ ಕಾಣುವೆ।।ನನ್ನ।।

ಪತಿತಪಾವನ ಮೂರ್ತಿ ನೀನೇ

ಪತಿತಪಾವನ ಮೂರ್ತಿ ನೀನೇ ಏಸು ನೀನೇ ಏಸು ನೀನೇ।। ಭುವಿಯೊಳ್ ಸುಗುಣನಾಗಿ ಬಂದವ ನೀನೇ ಏಸು। ದೇವರೊಳ್ ಅನುಪಮ ಪರತರದ ನೀನೇ।।ನಿನ್ನಯ ಭಕ್ತರಿಂ ಸ್ತುತ್ಯನು ನೀನೇ। ಉನ್ನತ ಪ್ರಭು ಸತ್ಯಭಾವನು ನೀನೇ।।ಏಸು ನೀನೇ।।

ಸಂತೋಷ ಉಕ್ಕುತ್ತೆ — ರಾಗ: ಶಂಕರಾಭರಣ-ನೋಟ್

ಸಂತೋಷ ಉಕ್ಕುತ್ತೆ ಸಂತೋಷ ಉಕ್ಕುತೆ। ಸಂತೋಷ ಉಕ್ಕೆ ಉಕ್ಕುತ್ತೆ। ಎಲ್ಲೆಲ್ಲಿಯು ಯೇಸು ನನ್ನ ರಕ್ಷಕ ನನ್ನ ಪಾಪವ ತೊಳೆವ। ಸಂತೋಷ ಉಕ್ಕೇ ಉಕ್ಕುತೇ।। ದಾರಿತಪ್ಪಿ ನಾ ನಡೆದೆ ಅದೇ। ದಾರಿಯಲ್ಲಿ ನಾ ಅಲೆದೆ। ಆದರೂ ಯೇಸು ಕೈಬಿಡದೆ। ತಾನೆ ಬಂದು ರಕ್ಷಿಸಿದ। ಇಂಥ ಒಳ್ಳೆಯ ಯೇಸು ನನ್ನ ಸ್ವಂತ ರಕ್ಷಕ ಹೋ.... ಹೋ.....।। ಪಾಪದಲ್ಲಿ ಇರುವವರು। ಪಾತಾಳದಲ್ಲಿ ಅಲೆಯುವರು। ನಾನು ಪರಲೋಕದಲ್ಲಿ ಹಾಡನೊಂದು ಹಾಡುವೆ। ಇಂಥ ಒಳ್ಳೆ ಯೇಸು ನನ್ನ ಸ್ವಂತ ರಕ್ಷಕ ಹೋ.... ಹೋ.....।।

ಮಂಗಳ

ಮಂಗಳಂ ಗುರು ಶ್ರೀ — ರಾಗ: ಶಂಕರಾಭರಣ-ನೋಟ್

ಮಂಗಳಂ ಗುರು ಶ್ರೀ ಚಂದ್ರಮೌಳೀಶ್ವರಗೆ। ಶಕ್ತಿ ಗಣಪತಿ ಶಾರದಾಂಬೆಗೆ ಶಂಕರಾಚಾರ್ಯರಿಗೆ।।ಪ।। ವಿದ್ಯಾರಣ್ಯರಿಗೆ। ವಿದ್ಯಾಶಂಕರಗೆ। ವಾಗೀಶ್ವರನಿಗೆ ವಜ್ರದೇಹ ಗರುಡಾಂಜನೇಯರಿಗೆ।।1।। ಕಾಲಭೈರವಗೆ ಕಾಳೀದುರ್ಗಿಗೆ। ವೀರಶೂರ ಧೀರ ಹನುಮ ಮಾರುತಿ ಚರಣಕ್ಕೆ।।2।। ಮಲ್ಲಿಕಾರ್ಜುನಗೆ ಚೆಲ್ವ ಜನಾರ್ದನಗೆ। ಅಂಬಾಭವಾನೀ ಕಂಬದ ಗಣಪತಿ ಚಂಡಿಚಾಮುಂಡಿಗೆ।।3।। ತುಂಗಭದ್ರೆಗೆ ಶೃಂಗವಾಸಳಿಗೆ। ಶೃಂಗೇರಿ ಪುರದೊಳು ನೆಲಸಿ ಇರುವ ಶಾರದಾಂಬೆಗೆ।।4।। ತತ್ವವೇತ್ತರಿಗೆ ಸತ್ಯಶೀಲರಿಗೆ। ಭಕ್ತಿಯಿಂದಲಿ ನಿತ್ಯವು ಬರುವ ಭಕ್ತವೃಂದಕ್ಕೆ।।5।।

ಸರ್ವಧರ್ಮ ಪ್ರಾರ್ಥನಾ ಸ್ತುತಿ

ಅಹಿಂಸಾ ಸತ್ಯ ಅಸ್ತೇಯ (ಏಕಾದಶವ್ರತ)

ಅಹಿಂಸಾ ಸತ್ಯ ಅಸ್ತೇಯ ಬ್ರಹ್ಮ ಚರ್ಯ ಅಸಂಗ್ರಹ। ಶರೀರಶ್ರಮ ಅಸ್ವಾದ ಸರ್ವತ್ರ ಭಯವರ್ಜನ। ಸರ್ವಧರ್ಮೀ ಸಮಾನತ್ವ ಸ್ವದೇಶಿ ಸ್ಪರ್ಶಭಾವನಾ। ಹೀ ಏಕಾದಶ ಸೇವಾವೀ ನಮ್ರತ್ವೇ ವ್ರತನಿಶ್ಚಯೇ।।

ಇತನಿ ಶಕ್ತಿ ಹಮೇ ದೇನಾ ದಾತ (ಹಿಂದಿ) — ರಾಗ: ಶುಭಪಂತುವರಾಳಿ

ಇತನಿ ಶಕ್ತಿ ಹಮೇ ದೇನಾ ದಾತಾ। ಮನಕಾವಿಶ್ವಾಸ್ ಕಮಜೋರ್ ಹೋನಾ। ಹಮ್ ಚಲೆನೇಕೆ ರಸ್ತೆಪೆ ಹಮ್‌ಸೆ। ಭೂಲಕರ್ ಭೀಕೋಯಿ ಭೂಲ್ ಹೋನಾ।।ಪ।। ಹರ್ ತರಫ್ ಜುಲ್ಮ ಹೈ ಬೇಬಸೀ ಹೈ। ಸಹಮಾ ಹಮಾ ಸಾ ಹರ್ ಆದ್‌ಮೀ ಹೈ। ಪಾಪಕಾ ಬೋಝ್ ಬಢತಾ ಹೀ ಜಾಯ್। ಜಾನೆ-ಕೈಸೆಯೆ ಧರತೀ ಥಮೀ ಹೈ। ಬೋಝ್

ಮಮತಾ ಸೆ ತೂ ಯೆ ಉಠಾಲೆ। ತೇರೀರಚನಾಕಾ ಹೀ ಅಂತ ಹೋ ನಾ।। ಹಮ್ ಚಲೇ।।1।। ಹಮ್ ಅಂಧೇರೆ ಮೆ ಹೈ ರೋಶನೀ ದೇಖೋನಾದೇ ಖುದ್ ಕೋ ಹೀ ದುಶ್ಮನೀಸೆ। ಹಮ ಸಜಾ ಪಾಯೆ ಅಪನೇ ಕಿಯೆ ಕೀ। ಮೌತ ಭೀ ಹೋತೋ ಸಹ ಲೇ ಖುಷೀ ಸೆ ಕಲ್ ಜೋ ಗುಜರಾ ಹೈ ಫಿರ್ ಸೇ ನಗುಜ್‌ರೆ। ಆನೆವಾಲಾ ವೋ ಕಲ್ ಐಸಾ ಹೋ ನಾ।।ಹಂ ಚಲೇ।।2।। ದೂರ್ ಅಜ್ಞಾನ ಕೆ ಹೊ ಅಂಧೇರೆ, ತೂಹಮೆ ಜ್ಞಾನ ಕೀ ರೋಶಿನೀ ದೇ। ಹರ ಬುರಾಯಿ ಸೆ ಬಚತೆ ರಹೆಹಮ್। ಜಿತನೀ ಭೀ ದೇ ಭಲೀ ಜಿಂದಗೀದೆ। ಬೈರ್ ಹೋನಾ ಕಿಸೀ ಕಾಕಿಸೀ ಸೆ। ಭಾವನಾ ಮನ್ ಮೆ ಬದಲೆ ಕೀ ಹೋನ।।ಹಂಚಲೇ।। ಹಮ್ ನ ಸೋಚೆ ಹಮೆ ಕ್ಯಾ ಮಿಲಾ ಹೈ। ಹಮ ಯೆ ಸೋಚೆ ಕಿಯಾ ಕ್ಯಾಹೈ ಅರ್ಪಣ। ಫೂಲ್ ಖುಷಿಯೋಂ ಕೆ ಬಾಂಟೆ ಸಭೀ ಕೋ। ಸಬಕಾ ಜೀವನ ಹೀ ಬನ್ ಜಾಯೆ ಮಧುಬನ್। ಅಪನೀ ಕರುಣಾ ಕಾ ಜಲ ತೂ ಬಹಾಕೆ। ಕರ್ ದೇ ಪಾವನ್ ಹರ್‌ಏಕ್ ಮನ್ ಕಾ ಕೋನಾ।।ಹಮ್ ಚಲೇ।।4।।

ಈಶಾವ್ಯಾಸಂಮಿದಂ ಸರ್ವಂ — **ರಾಗ: ಕಲ್ಯಾಣಿ**

ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್। ತೇನ ತ್ಯಕ್ತೇನ ಭುಂಜೀಥಾಃ। ಮಾ ಗೃಧಃ ಕಸ್ಯಸ್ವಿದ್ಧನಮ್।। ಪ್ರಾತಃ ಸ್ಮ ರಾಮಿ ಹೃದಿ ಸಂಸ್ಫುರದಾತ್ಮ ತತ್ವಂ। ಸಚ್ಚಿತ್ ಸುಖಂ ಪರಮಹಂಸಗತಿಂ ತುರೀಯಂ। ಯತ್ ಸ್ವಪ್ನ ಜಾಗರ ಸುಷುಪ್ತ ಮವೈತಿ ನಿತ್ಯಂ। ತದ್ ಬ್ರಹ್ಮ ನಿಷ್ಕಲಮಹಂ ನ ಚ ಭೂತ ಸಂಘಃ।।1।। ಪ್ರಾತರ್ಭಜಾಮಿ ಮನಸೋ ವಚಸಾಮಗಮ್ಯಂ। ವಾಚೋ ವಿಭಾಂತಿ ನಿಖಿಲಾ ಯದನುಗ್ರಹೇಣ। ಯನ್ನೇತಿ ನೇತಿ ವಚನೈರ್ನಿಗಮಾ ಅವೋಚುಃ। ತಂ ದೇವ ದೇವಮಜಮಚ್ಯುತ ಮಾಹುರಗ್ರ್ಯಂ।।2।। ಪ್ರಾತರ್ನಮಾಮಿ ತಮಸಃ ಪರಮರ್ಕವರ್ಣಂ। ಪೂರ್ಣಂ ಸನಾತನಪದಂ ಪುರುಷೋತ್ತಮಾಖ್ಯಂ। ಯಸ್ಮಿನ್ನಿದಂ ಜಗದಶೇಷಮಶೇಷಮೂರ್ತೌ। ರಜ್ಜ್ವಾಂ ಭುಜಂಗಮ ಇವ ಪ್ರತಿಭಾಸಿತಂ-ವೈ।।3।।

ಎಪ್ಪಡಿ ನಾ ತೊಳುವೇನ್ ಇರೈವಾ (ತಮಿಳು) — **ರಾಗ: ಷಣ್ಮುಖಪ್ರಿಯ**

ಎಪ್ಪಡಿ ನಾ ತೊಳುವೇನ್ ಇರೈವಾ ಉನ್ನೈ ಎನ್ ಮನ ಕೋವಿಲಿಲ್ ಎಂದ ವಿಧಂ ಎಣ್ಣಿ। ಅಪ್ಪಾ ಶಿವಾ ಎನವಾ ಅಂಬಿಕೆಯೇ ಎನವಾ। ಕರಿಮುಖನೇ ಎನವಾ ಕಂದಾನೀ ಎನವಾ। ಸೀತಾರಾಮ ಎನವಾ ಚಿನ್ನಕಣ್ಣಾ ಎನವಾ। ಶ್ರೀನಾರಾಯಣ ಎನವಾ ಬುದ್ಧಾನಬಿ ಎನವಾ। ಪುನಿತ ಏಸು ಎನವಾ। ಬುದ್ಧಿಯುಂವಾಕುಂ ಕಾಯಮುಂ ನೀ ಎನವಾ।।

ಎಲ್ಲೆಲ್ಲಿಯು ನೀನಿಹೆಯಂತೆ — **ರಾಗ: ಕುರಂಜಿ**

ಎಲ್ಲೆಲ್ಲಿಯು ನೀನಿಹೆಯಂತೆ । ಎಲ್ಲವು ನೀನಂತೆ ।।ಪ।। ಎಲ್ಲದರಾದಿಯು ನೀನಂತೆ।।ಅ.ಪ.।। ಎಲ್ಲದ ರಂತ್ಯವು ನೀನಂತೆ। ಚಿಂತೆಗೆ ತಿಳಿಯದೆ। ಮಾತಿಗೆ ಸಿಲುಕದೆ। ಅಂತರಾತ್ಮನಾಗಿಹೆಯಂತೆ।।1।। ವೇದಗಳರಿಯದ ವಿಭುವಂತೆ। ಯೋಗಿಗಳರಿಯದ ಪ್ರಭುವಂತೆ। ಭಕ್ತರ ಹೃದಯದಿ ನೆಲಸುತ ಮುದದಿ। ಭಕ್ತವತ್ಸಲನಾಗಿಹೆಯಂತೆ।।2।। ಮಾಯಾತೀತನು ನೀನಂತೆ। ಮಾಯಾರೂಪಿಯು ನೀನಂತೆ। ಪಾಪಪುಣ್ಯಗಳ-ಜನನ ಮರಣಗಳ। ಮೀರಿಹ ಪುರುಷನು ನೀನಂತೆ।।3।। ಲೋಕವ ರಕ್ಷಿಸೆ ಬಹೆಯಂತೆ। ಶೋಕಿಪರಿಗೆ ನೀ ದಯೆಯಂತೆ। ರಾಮನು ನೀನಂತೆ। ಕೃಷ್ಣನು ನೀನಂತೆ। ಶ್ರೀ ನರಸಿಂಹನು ನೀನಂತೆ।।4।। ಅದ್ವಿತೀಯನಾಗಿಹೆಯಂತೆ। ಹೃನ್ಮನವಾಸಿಯು ನೀನಂತೆ। ಶಕ್ತಿಯು ನೀನಂತೆ। ಸಿದ್ಧರ ಮುಕ್ತಿಯು ನೀನಂತೆ।।5।। ಅಂತೇ ಅಂತೇ ಯಾಕಂತೆ ತತ್ತ್ವವೆಂಬುದಂತೆಯ ಸಂತೆ। ಅಂತೇ ಅಂತೇ ಯಾಕೀ ಚಿಂತೇ ಕಟ್ಟಕಡೆಗೆ ನೀ ಬಯಲಂತೇ।।6।।

ಕಾಪಾಡು ಹೇ ದೇವ ನಮ್ಮನೂ — **ರಾಗ: ಧರ್ಮವತಿ**

ಕಾಪಾಡು ಹೇ ದೇವ ನಮ್ಮನೂ। ಬಹು ರೂಪಾದ ದೊರೆ ನೀಡು ಲೇಸನೂ।। ಮರೆ ಹೊಕ್ಕೆ ಮರೆಯದಿರೆನ್ನನೂ। ವರವ ಕರುಣಿಸಿ ಕಾಯೆಂದು ಬೇಡ್ವನೂ।।1।। ಕರುಣಾ ಶರಧಿಯೇ ನಿನ್ನಯಾ। ನಿಜ ಶರಣಾರ ಪಾಲಿಸೊ ಚಿನ್ಮಯಾ।। ಭವದಾ ಬವಣೆ ನೀಗಾಡಿಸೋ। ಅನುಭವದಾ ವಿವೇಕವ ಕೊಡಿಸೋ।।2।। ಅರಿಚಾರ ತಮವನು ಓಡಿಸೋ। ನಿನ್ನ ಸುವಿಚಾರ

ಭಕುತಿಯ ಮೂಡಿಸೋ। ಜಗದಾ ಜನಕ ನೀ ಪಾವನಾ॥3॥ ವರ ಸುಗುಣಾತ್ಮ ಮುಕ್ತಿಯ ಸಾಧನಾ। ಅಗಣೀತ ಗುಣಗಣ ಪಾವನಾ। ಸಿದ್ಧಿ ಸಿಗುವಂತೆ ಬೆಳಗಿಸು ಜೀವನಾ॥4॥

ಕಾಯೋ ದೇವಾ ದಯಾಕರ **ರಾಗ: ಕಾನಡ**

ಕಾಯೋ ದೇವಾ ದಯಾಕರ। ವಿನಯದಿ ಬೇಡುವೆವೂ। ವಿನಯದಿ ಬೇಡುವೆವೂ॥ಪ॥ ಜ್ಞಾನಾರ್ಜನೆಗೇ ಬಂದಿಹ ಎಮಗೇ। ತೋರಿಸು ದಿವ್ಯ ಪಥಾ॥ಅ.ಪ.॥ ಚಿತ್ತವ ಕಲಕುವ ಮಾಯೆಯ ತೊಲಗಿಸಿ। ಸತ್ಯ ದೀಪ ಬೆಳಗೋ....॥2ಸಾರಿ॥ ಉತ್ತಮೋತ್ತಮ ಭಾಗ್ಯ ಅನುಗ್ರಹಿಸೋ॥1॥ ಏನೊಂದರಿಯದ ಕಿರಿಯರ ಮೇಲೆ। ಕರುಣೆಯ ರಕ್ಷೆ ಇಡೋ॥2ಸಾರಿ॥ ಸಾನುರಾಗದೊಳೆಮ್ಮ ದೋಷವ ಪರಿಹರಿಸೋ॥2॥

ಜಗದ ಜನಕ ನಮಗೆ ಬೆಳಕ **ರಾಗ: ಬೇಹಾಗ್**

ಜಗದ ಜನಕ ನಮಗೆ ಬೆಳಕ ತೋರೊ ಕರುಣದೀ....। ಭಕುತಿಯಿಂದ ಭಜಿಸುತಿಹೆವು ದಾರಿ ಕಾಣದೇ॥ಪ॥ ಮತಿಗೆ ಕವಿದ ಮೋಹ ತಮವ ಕಳೆಯಲಾರೆಯ। ಹಿತದ ನಡೆಯ ನುಡಿಯ ಕಲಿವ ಪಥವ ತೋರಯ್ಯಾ॥1॥ ಮನವು ಮಾತು ಕೃತಿಯು ನಮ್ಮದಿರಲಿ ನಿರ್ಮಲ। ವಿನಯ ಶೀಲ ನಿಯಮ ಕಲಿಸಿ ನೀಡು ಗುಣಫಲಾ॥2॥

ತುಮ್ಹೀಹೋ ಮಾತಾ ಪಿತಾ (ಹಿಂದಿ) **ರಾಗ: ಸಿಂಧುಭೈರವಿ**

ತುಮ್ಹೀಹೋ ಮಾತಾ ಪಿತಾ ತುಮ್ಹೀಹೋ। ತುಮ್ಹೀಹೋ ಬಂಧು ಸಖಾ ತುಮ್ಹೀಹೋ॥1॥ ತುಮ್ಹೀ ಹೋ ಸಾಥಿ ತುಮ್ಹೀ ಸಹಾರಾ। ಕೋಯೀನ ಅಪನಾ ಸಿವಾ ತುಮ್ಹಾರಾ॥2॥ ತುಮ್ಹೀ ಹೊ ನಯ್ಯಾ ತುಮ್ಹೀ ಖಿವಯ್ಯಾ। ತುಮ್ಹೀಹೊ ಬಂಧು ಸಖಾ ತುಮ್ಹೀಹೊ॥3॥ ಜೊ ಖಿಲ್ ಸಕೇನ ವೋ ಫೂಲ್ ಹಮ್ ಹೈ॥ ತುಮ್ಹಾರೆ ಚರಣೋಂಕಿ ಧೂಲ್ ಹಮ್ ಹೈ॥4॥ ದಯಾ ಕಿ ದೃಷ್ಟಿ ಸದಾ ಹಿ ರಖನಾ। ತುಮ್ಹೀ ಹೊ ಬಂಧು ಸಖಾ ತುಮ್ಹೀ ಹೋ॥5॥

ತಂದೆ ನೀ ನೀಡು ಬಾ **ರಾಗ: ಧರ್ಮವತಿ**

ತಂದೆ ನೀ ನೀಡು ಬಾ ಶಕ್ತಿ ಮನಸಿಗೆ। ಜ್ಯೋತಿ ನೀನಾಗು ಬಾ ಬಾಳ ಇರುಳಿಗೆ। ನಮ್ಮ ಅಜ್ಞಾನ ನೀ ನೀಗುಬಾ। ಬಾಳಾ ಹಾದಿಗೆ ಗುರಿ ತೋರುಬಾ॥ಪ॥ ನಮ್ಮ ಮನದಿಂದ ದೌರ್ಬಲ್ಯ ದೂಡು। ಸತ್ಯಪಥದಲ್ಲಿ ನಡೆವಂತೆ ಮಾಡು। ಕಷ್ಟ ನೂರಾರು ನೀ ಪಾರು ಮಾಡು। ನಿತ್ಯ ಸಂತೋಷ ನಮಗೆಂದೂ ನೀಡು। ಪ್ರೇಮ ಹೂವಾಗಲಿ ದ್ವೇಷ ದೂರಾಗಲಿ। ಸೇಡ ವಿಷಜ್ವಾಲೆ ಮನದಲಿ ಕೊನೆಯಾಗಲಿ॥1॥ ಎಂಥ ಬಿರುಗಾಳಿ ಎದುರಾದರೇನು। ನಿಂತು ತಡೆವಂಥ ಛಲ ನೀಡು ಎಂದೂ। ನಮ್ಮ ಸಂತೋಷ ಪರರಲ್ಲಿ ಹಂಚೀ। ನಾವು ನಲಿವಂತೆ ಮನನೀಡು ಎಂದೂ। ದ್ರೋಹ ದೂರಾಗಲಿ, ಸ್ನೇಹ ಹೊಳೆಯಾಗಲಿ। ಸ್ವಾರ್ಥ ಮನದಿಂದ ಎಂದೆಂದು ಕೊನೆಯಾಗಲಿ॥2॥

ದೇವಕಾಯೋ ಸದಾ **ರಾಗ: ಧರ್ಮವತಿ**

ದೇವಕಾಯೋ ಸದಾ। ಬೇಡುವೀ ಮಕ್ಕಳಾ। ಜಗದಾಧಾರಾ। ಶರಣಾಗತಾ ಪಾಲ ದಯಾ ಸಾಗರಾ॥ಪ॥ ನೀಡು ಸುಜ್ಞಾನ ಸೌಜನ್ಯ ಸದ್ಭಕ್ತಿಯಾ। ನೀಡುಧೀರ್ಘಾಯುರಾರೋಗ್ಯ ಸಂಪತ್ತಿಯಾ॥ ದಿನ ನಿತ್ಯ ನಿನ್ನನೇ ಪ್ರಾರ್ಥಿಪೆವೋ। ಜಗದಾಧಾರಾ॥1॥ ನಿನ್ನ ತೇಜಸ್ಸಿನಿಂದೆಲ್ಲ ಬೆಳಗೂತಿದೇ। ನಿನ್ನ ಸಂಕೇತದೀ ಲೋಕ ಬಾಳೂತೀದೇ। ಗತಿನೀನೇ ಮತಿ ನೀನೇ ನಂಬೀಹೆವೋ। ಜಗದಾಧಾರಾ॥2॥ ನಿನ್ನ ಕಾರುಣ್ಯದಾಕಾಶ ಈ ಭೂಮಿಯೂ। ನಿನ್ನ ವಾತ್ಸಲ್ಯದಿಂದಾದುದೀ ಬಾಳ್ವೆಯೂ। ಅನುದಿನ ನಿನ್ನನೂ ಪ್ರಾರ್ಥಿಪೆವೂ ಜಗದಾಧಾರಾ॥3॥

ದೇವ ನಿನ್ನ ಬೇಡುವೆ **ರಾಗ: ಧರ್ಮವತಿ**

ದೇವ ನಿನ್ನ ಬೇಡುವೆ ಕಾಯೋ ದೂರ ಮಾಡದೇ। ಶಕ್ತಿ ನೀಡು ಬಾಳುವಂತೆ ಸತ್ಯಧರ್ಮ ಮೀರದೇ।।ಪ।। ಸೂರ್ಯನಾಗಿ ಮೇಲೆ ಚಲಿಸಿ ಕತ್ತಲನ್ನು ಹರಿಸುವೆ। ಮೋಡವಾಗಿ ನೀರು ಸುರಿಸಿ ಲೋಕಕನ್ನ ಉಣಿಸುವೆ। ಪ್ರಾಣವಾಯುವಾಗಿ ಸುಳಿದು ಕಾಣದಂತೆ ಕಾಯುವೆ। ತಂದೆ ನಿನ್ನ ಕರುಣೆಯ... ಹೇಗೆ ತಾನೇ ಮರೆಯುವೆ।।1।। ಹಸಿರಿನಲ್ಲೂ ಹೂವಿನಲ್ಲೂ ನಿನ್ನ ಹೆಜ್ಜೆ ಗುರುತಿದೆ। ಕೋಟಿ ಹಕ್ಕಿ ಕಂಠದಲ್ಲಿ ನಿನ್ನ ಸ್ತೋತ್ರ ಚಿಮ್ಮಿದೆ। ಎಲೆ ಎಲೆಯೂ ನಿನ್ನ ಚಿತ್ರಕಲೆಯ ಘನತೆ ಸಾರಿದೆ। ಎಲ್ಲೆಲ್ಲೂ ನೀನೆ ತಂದೆ ನಿನ್ನದಲ್ಲದೇನಿದೆ।।2।। ಈ ಲೋಕ ನೀನು ಇರುವ ಸುಂದರ ದೇವಾಲಯ। ಒಳಗೆ ಕೂತು ಮಿಡಿವೆಯಂತೆ ಇದರ ಎಲ್ಲ ನಾಡಿಯ ಇದರ ಸೇವೆ ನಿನ್ನ ಪೂಜೆ ಎಂಬ ಋಷೀವಾಣಿಯ। ನಂಬಿದೆವು, ಹರಸು ನಮ್ಮ ನಾವು ಕಲಿವ ಶಾಲೆಯ।।3।।

ದೇವ ನಿನ್ನ ಬೇಡುತಲಿರುವೆವು **ರಾಗ: ಕಾನಡ**

ದೇವ ನಿನ್ನ ಬೇಡುತಲಿರುವೆವು ಕಾಪಾಡೋ ದಯದೇ। ಕಾಪಾಡೋ ದಯದೇ।।ಪ।। ಜೀವದಿ ಭಾವದಿ ನೀನೆಲಸಿರುವೇ। ನೀಡೋ ಶುಭ ನಮಗೇ। ನೀಡೋ ಶುಭ ನಮಗೆ।।ಅ.ಪ.।। ವಿದ್ಯೆಯ ಬುದ್ಧಿಯ ಸಿದ್ಧಿಯ ಕೊಡುತಾ। ಜೀವನವಾ ಬೆಳಗೋ। ಉದ್ಯಮದೊಂದಿಗೆ ಸದ್ಗತಿ ಪಡೆಯುವಾ ತತ್ವವ ನೀ ಮೊಳಗೋ।।1।। ಎಮ್ಮಯ ತನುಮನ ಗುಣ ಶೀಲಗಳಾ ನಿರ್ಮಲವಿಡು ದೇವಾ। ಒಮ್ಮನದಿಂದಲಿ ಎಲ್ಲರಿಗಾಗಿ।।2ಸಾರಿ।। ಬಾಳಲಿ ಈ ಜೀವ।।2।। ಓದುವ ಬರೆಯುವ ಆಡುವವೇಳೆ ಗೈವೆವು ನಿನ ಧ್ಯಾನ। ಆದರದಿಂದಲಿ ಮುನ್ನಡೆವಂತೆ ಕೊಡು ನಿರ್ಮಲ ಜ್ಞಾನ।।3।।

ದೈವವೇ ದೀನದಯಾ ಬೇಡುವೆ **ರಾಗ: ಶಂಕರಾಭರಣ**

ದೈವವೇ ದೀನದಯಾ ಬೇಡುವೆ। ಮೌನವ ನೀ ತಾಳುವೆ ಇದು ನ್ಯಾಯವೆ।।ಪ।। ನಿನ್ನನು ನಂಬಿದೆ ಮನದಲಿ ತುಂಬಿದೆ। ಪ್ರೇಮದಿ ನಾ ಕರೆದೆ ಭಕುತರ ಪಾಲನೆ। ಭಯಹರ ಕಾರನೆ ಪೊರೆಯೊ ದಯಾಮಯ।।1।। ನಿನ್ನಾರಾಧನೆ ನನ್ನುಸಿರಾದರೆ ಈ ಮೌನವು ತಾ ಸರಿಯೆ। ಎನ್ನ ನೀ ಪೊರೆದು ಕರವ ನೀ ಪಿಡಿದು। ಪಾಲಿಸು ಎನ್ನ ಬೆಳಗಿಸು।।2।। ನಿನ್ನ ಕಾಣದಿಹ ಜನ್ಮವೇಕೆ। ನಿರ್ದಯವ ನೀ ತೊರೆದು ಕರುಣೆ ತೋರಿಸೈ। ಮೊರೆಯ ಆಲಿಸೈ।।3।।

ನಮಿಸುವೆ ನಿತ್ಯ ನಿರಂಜನ **ರಾಗ: ಅಭೇರಿ**

ನಮಿಸುವೆ ನಿತ್ಯ ನಿರಂಜನ ದೇವಾ। ವರಸುಖ ಸನ್ಮತಿಗಳ ನೀವಾ।।ಪ।। ವಂದಿಪೆನಿನ್ನಯ ಘನತೇಯನೂ। ಕೋಟೀಸೂರ್ಯ ಸಮತೇಜವನೂ। ನಮ್ಮೀ ಕಾರ್ಯವು ದಿನದಿನವೂ। ಹೃದಯವ ಬೆಳಗುವ ಭಾವವನೂ।।1।। ಮನದಲಿ ತುಂಬಲಿ ನಿನ್ನಯ ಪ್ರೇಮ। ಜನತೆಯ ಸೇವೆಯೇ ನಿತ್ಯದ ನಿಯಮ। ನಡೆನುಡಿ ಕಾರ್ಯಗಳೆಲ್ಲಕು ನೀನೇ। ಸತ್ಪಥ ದರ್ಶಕ ಮಂಗಳ ಧಾಮಾ।।2।।

ನಿನ್ನೊಲುಮೆ ನಮಗಿರಲಿ ತಂದೆ **ರಾಗ:ಸಿಂಧುಭೈರವಿ**

ನಿನ್ನೊಲುಮೆ ನಮಗಿರಲಿ ತಂದೆ। ಕೈ ಹಿಡಿದು ನೀ ನಡೆಸು ಮುಂದೆ।।ಪ।। ತಾನುರಿದು ಜಗಕೆಲ್ಲ ಜ್ಯೋತಿಯನು ನೀಡುವ। ದೀಪದೊಲು ನೀ ನೆಮ್ಮ ಅನುಗ್ರಹಿಸು ತಂದೆ।। ಕಾನನದ ಸುಮವೊಂದು ಸೌರಭವ ತಾ ಸೂಸಿ। ಸಫಲತೆಯ ಪಡೆವಂತೆ ಮಾಡೆಮ್ಮ ತಂದೆ। ಸಿರಿಯು ಸಂಪದ ಬೇಡ ಯಾವ ವೈಭವ ಬೇಡ। ನಿನ್ನ ಕರುಣೆಯೇ ಒಂದು ಸಾಕೆನಗೆ ತಂದೆ।।1।। ನಿನ್ನ ಈ ಮಕ್ಕಳನು ಪ್ರೇಮದಲಿ ನೀನೋಡು। ಈ ಮನೆಯು ಎಂದೆಂದೂ ನಗುವಂತೆ ಮಾಡು। ನಂಬಿದರೆ ಭಯವಿಲ್ಲ। ನಂಬದಿರೆ ಬಾಳಿಲ್ಲ। ಅಂಬಿಗನೇ ನೀ ನಡೆಸು ಈ ಬಾಳ ನೌಕೆ। ಯಾವ ನೋವೇ ಬರಲಿ। ಎದೆಗುಂದದಿರಲಿ। ಸತ್ಯ ಮಾರ್ಗದಿ ನಡೆವ ಶಕ್ತಿ ಕೊಡು ತಂದೆ।।2।।

ನೀನೇ ದೇವ ಲೋಕಾಧಾರ **ರಾಗ: ಬಿಲಹರಿ**

ನೀನೇ ದೇವ ಲೋಕಾಧಾರ। ದೀನಜನಾವನ ಗುಣಸಾರಾ।।ಪ।। ನೀಡಿ ಆರೋಗ್ಯ ಕಾಪಾಡು ನಿಜಭಾಗ್ಯಾ। ನೀ ಜಡತೆಯ ತೊಲಗಿಸಿ ಕೆಡುಕನು ಕಳೆದು ಬದುಕನು ಬೆಳಗಿಸು।।ಅ.ಪ।। ಕರುಣಾಕರನೇ। ಜಗದೊಳು ನೀನೇ। ಪೊರೆಯುವ ಪರತರ ಮಹಿಮನು ತಾನೇ। ಕಿರಿತನದಾ। ಕೊರತೆಗಳಾ। ಪರಿಹರಿಸೀ। ಪೊರೆ ನಿಜ ಶರಣರ।।1।। ಓ ಪ್ರಭುವರನೇ। ಓ ನಿರುಪಮನೇ। ದೊರಕಿಸು ಸದ್ಬೋಧೇ। ಗತಿಮತಿಯಾ ಈ ನಡೆನುಡಿ ನಿಯಮಿಸಿ। ಕಳೆಬಾಧೇ ಸಂತತ ಕಾಪಾಡೋ। ಪಾಪವ ನೀಗಾಡೋ ಪರಮಾತ್ಮಾ ಘನಮಹಿಮಾ। ನರಜನುಮಾ। ಸಫಲವಗೊಳಿಸಲು ಕೊಡು ಬಲ।।2।।

ಪೊರೆಯೊ ದೇವ ಕರುಣೆಯಿಂದಾ **ರಾಗ: ಮಲಯಮಾರುತ**

ಪೊರೆಯೊ ದೇವ ಕರುಣೆಯಿಂದಾ। ನಮ್ಮನನು ದಿನಾ। ಪರಮ ಪಾವನಾತ್ಮ ಮಹಿಮಾ। ನಿನಗೆ ವಂದನಾ।।ಪ।। ಎಲ್ಲ ಜೀವ ಜಂತುಗಳಿಗೆ। ಸಲ್ಲಿಸಿರುವೆ ನಿನ್ನ ದಯೆಯಾ। ಬೆಲ್ಲ ಬೇವ ಭವದೊಳಿರಿಸಿ। ಎಲ್ಲೋ ಅಡಗಿ ನೋಡುತಿರುವೆ।।1।। ಬಾಲಭಾವ ಜ್ಞಾನ ಶೂನ್ಯ। ಲೋಲಮನರು ನಾವು। ನಿನ್ನ ಕಾಲ ಬುಡದಿ ಬೇಡುತಿಹವು। ಪಾಲಿಸೆಮಗೆ ದಿವ್ಯ ಮತಿಯಾ।।2।। ಆಟದಲ್ಲಿ ಪಾಠದಲ್ಲಿ। ಊಟಕೂಟಗಳಲಿ ನಿನ್ನ। ಸಾಟಿಯಾಗಿ ನೆನೆಯುತಿಹವು। ಕಾಟಗಳನು ಕಳೆದು ಸಲಹೋ।।3।।

ಬ್ರಹ್ಮಾನಂದಂ ಸ್ವಾಮಿ ನಾಮಂ **ರಾಗ: ಕಲ್ಯಾಣಿ**

ಬ್ರಹ್ಮಾನಂದಂ ಸ್ವಾಮಿ ನಾಮಂ। ನೇತ್ರಾನಂದಂ ಸ್ವಾಮಿ ರೂಪಂ। ನಿತ್ಯಾನಂದಂ ಸ್ವಾಮಿ ಗೀತಂ। ಹೃದಯಾನಂದಂ ಸ್ವಾಮಿ ಬೋಧಂ।। ಆತ್ಮಾನಂದಂ ಸ್ವಾಮಿ ಜ್ಞಾನಂ। ಆನಂದಂ ಪರಮಾನಂದಂ। ಸ್ವಾಮಿ ಸೇವಕ ಆನಂದಂ(2)।। ಓಂ ಗುರುನಾಥ ಜಯಗುರುನಾಥ,(2।।) ದೀನನಾಥ ದೀನಬಂಧು। ದಿವ್ಯಸ್ವರೂಪ ಸದ್ಗುರು ನಾಥ।-ಓಂ । ಶಿವ ಗುರು ನಾಥ ಸ್ವಾಮಿ ನಾಥ।(3।।।) ಚಿನ್ಮಯ ರೂಪ ಸದ್ಗುರು ನಾಥ ।।ಓಂ।।

ಭಗವಂತಾ2 ಕಲ್ಲಾಗಿ ಕುಳಿತಿರುವೆ **ರಾಗ : ರೇವತಿ**

ಭಗವಂತಾ ಭಗವಂತಾ। ಕಲ್ಲಾಗಿ ಕುಳಿತಿರುವೆ ಏಕೆ ಭಗವಂತ। ಸೊಲ್ಲ ನುಡಿಯದೇ ಬರಿ ನಿಶ್ಚಲತೆ ಏಕೇ। ಭಗವಂತಾ ಭಗವಂತಾ।।ಪ।। ಪರಿಪರಿಯ ಕಷ್ಟವನು ಉಸುರುವರು ಕೆಲವರು। ಪರಿಹಾರ ಬಯಸಿ ನಿನ್ನೊಡನೆ ಬೇಡುವರು। ಧನಕನಕ ಬೇಕೆಂದು ಕನವರಿಸಿ ಬರುತಿಹರು। ಮನದಾ ಬಯಕೆಯನರಸಿ ಕಾಡುವರು ಬಂದು।।1।। ಪರರ ಬೇಡಿ ಅನ್ಯಾಯ ಮತ್ಸರದಿ ಮುಳುಗೆದ್ದು। ಪರಹಿತವ ಸಾಧಿಸುವ ಈ ಸೋಗಿನಿಂದ। ಹರಕೆ ಕಾಣಿಕೆಯನು ನಿನ್ನಬಳಿ ಸುರಿದು। ಮರಳುವರು ತಾವೇ ಪುಣ್ಯಾತ್ಮರೆಂದು।।2।। ಬೇಡಿಕೆಗೆ ಕಿವುಡಾದೆ ದುಷ್ಕೃತಿಗೆ ಕುರುಡಾದೆ। ಬೇಡಿ ಕಲಹಕೆ ಕರೆಯೇ ನೀ ಮೌನಿಯಾದೆ। ಮಾತು ಜಗಳಕೆ ನಾಂದಿ ನೋಟ ನಯನಕೆ ಬಂಧಿ। ಸೋತು ಗೆಲ್ಲುವ ಆಟ ಹೂಡಿದೆಯಾ ನೀನು-।।3।।

ಮಲೆಗಳಲಿ ಕಲ್ಲುಂಟು ಹೊಲಗಳಲಿ **ರಾಗ: ಸಾರಂಗ**

ಮಲೆಗಳಲಿ ಕಲ್ಲುಂಟು, ಹೊಲಗಳಲಿ ಹುಲ್ಲುಂಟು। ಹೊಳೆಗಳಲಿ ಮೀನುಂಟು, ಗೂಡಿನಲಿ ಜೇನುಂಟು। ನೀನುಂಟು ಎಲ್ಲೆಲ್ಲೂ ಓ ದೇವ ನೀನುಂಟು ಎಲ್ಲೆಲ್ಲೂ।।1।। ಬಾಳೆಯಲಿ ಫಲವುಂಟು, ಚಂದ್ರನಲಿ ಮೊಲವುಂಟು। ಹುತ್ತದಲಿ ಹಾವುಂಟು, ಬೆಂಕಿಯಲಿ ಕಾವುಂಟು। ನೀನುಂಟು ಎಲ್ಲೆಲ್ಲೂ ಓ ದೇವ ನೀನುಂಟು ಎಲ್ಲೆಲ್ಲೂ।।2।। ದೀಪದಲಿ ಬೆಳಕುಂಟು, ಕೋಪದಲಿ ಹುಳುಕುಂಟು। ಸರುವ ಕಡೆ ನೀನುಂಟು ಇರುವ ಕಡೆ ನಾನುಂಟು। ನೀನುಂಟು ಎಲ್ಲೆಲ್ಲೂ ಓ ದೇವ ನೀನುಂಟು ಎಲ್ಲೆಲ್ಲೂ।।3।।

ಮಂಗಳವನು ಕರೆಯುತಿರುವ ದೇವ **ರಾಗ: ರೇವತಿ**

ಮಂಗಳವನು ಕರೆಯುತಿರುವ ದೇವ ಶುಭವ ನೀಡಲಿ। ಧರ್ಮ ಅರ್ಥ ಕಾಮ ಮೋಕ್ಷ ಪಥವ ನಮಗೆ ತೋರಲಿ॥ಪ॥ ಜ್ಞಾನದುದಯ ಭಾಗ್ಯದುದಯ ಎಮಗೆ ನಿತ್ಯ ದೊರೆಯಲಿ। ಸತ್ಯಧರ್ಮ ನ್ಯಾಯ ನಡತೆ ತಿದ್ದಿ ನಮ್ಮ ಬೆಳಗಲಿ॥1॥ ಜಾತಿ ಪಂಥ ಭೇದ ಭಾವ ಎಮ್ಮ ಬಿಟ್ಟು ತೊಲಗಲಿ। ಒಂದೇ ತಾಯ ಮಕ್ಕಳೆಂಬ ಶುದ್ಧ ಭಾವ ಬೆಳೆಯಲಿ॥2॥

ಯಂ ಬ್ರಹ್ಮಾ ವರುಣೇಂದ್ರ **ರಾಗ: ಕಲ್ಯಾಣಿ**

ಯಂ ಬ್ರಹ್ಮಾ ವರುಣೇಂದ್ರ ರುದ್ರಮರುತಃ। ಸ್ತುನ್ವಂತಿ ದೀವ್ಯೈಃ ಸ್ತವೈಃ। ವೇದೈಃ ಸಾಂಗಪದಕ್ರಮೋಪನಿಷದೈಃ। ಗಾಯಂತಿ ಯಂ ಸಾಮಗಾಃ। ಧ್ಯಾನಾವಸ್ಥಿತ ತದ್ಗತೇನ ಮನಸಾ। ಪಶ್ಯಂತಿ ಯಂ ಯೋಗಿನೋ। ಯಸ್ಯಾಂತಂ ನವಿದುಸ್ಸುರಾಸುರಗಣಾಃ। ದೇವಾಯ ತಸ್ಮೈ ನಮಃ॥

ಶಕ್ತಿಯಕೊಡು3 ಹೇ ಪ್ರಭೋ **ರಾಗ: ಕಾನಡ, ರೂಪಕತಾಳ**

ಶಕ್ತಿಯಕೊಡು ಶಕ್ತಿಯಕೊಡು ಶಕ್ತಿಯಕೊಡು ಹೇ ಪ್ರಭೋ॥ಪ॥ ಸತ್ಯಕಾಗಿ ನಿಲುವ ಛಲವ। ದೀಪ್ತಿಗೊಳಿಸು ನನ್ನೊಳು। ಎಡರ ಕಡಲ ತೆರೆಹೆಡೆಗಳು। ಭೋರ್ಗರೆಯುತ ಬಂದರೂ। ತಡೆದು ನಿಲುವ ಮಳಲ ತಡಿಯ ಬಲವ ನೀಡು ಶ್ರೀಗುರು॥1॥ ನೂರುಉಲ್ಕೆ ರಭಸ ಮತಿಯ ಅಬ್ಬರಗಳ ನಡುವೆಯೂ। ನಿಯತ ಗತಿಯ ತಾರಗೆಯೊಲು। ನೇರವಿರಿಸು ನನ್ನನು॥2॥ ಗುಡುಗು ಸಿಡಿಲು ಮಿಂಚಿನಾಚೆ। ಅಚಂಚಲದ ನೀಲಿಗೆ। ಸದಾ ತುಡಿವ ಗರುಡಗತಿಯ ತುಂಬು ನನ್ನ ಹೃದಯಕೆ॥3॥

ಸೃಷ್ಟಿಕರ್ತ ಈಶ ಪ್ಯಾರೆ (ಹಿಂದಿ) **ರಾಗ: ಸಿಂಧುಭೈರವಿ**

ಸೃಷ್ಟಿಕರ್ತ ಈಶ ಪ್ಯಾರೆ ಏಕ್‌ಹೋ ತುಮ್ ಏಕ್ ಹೋ॥ಪ॥ ತುಮ್‌ಹೋ ಅಲ್ಲಾ ತುಮ್‌ಹೊ ಈಶ। ಬುದ್ಧ ರಘುರಾಮ್ ಹೋ ತುಮ್ಹೀ। ತುಮ್ ಹೋ ಶಂಕರ್ ತುಮ್‌ಹೋ ವಿಷ್ಣು। ರಾಮಕೃಷ್ಣ ಹೋತುಮ್ಹೀ॥1॥ ಮಂದಿರೋಂಮೆ ತುಮ್‌ಕೊ ದೇಖಾ। ಮಸ್‌ಜಿದೋಂ ಮೆ ತುಮ್ ಕೊ ದೇಖಾ। ಗಿರಿಜೋಂ ಮೇಭೀ ತುಮ್‌ಕೊ ದೇಖಾ ಏಕ್ ಹೋ ತುಮ್ ಏಕ್‌ಹೋ॥2॥ ವೇದೋಂನೇ ಜೋ ತುಮಕೊ ಪಾಯ। ಬೈಬಲನೆ ತುಮಕೊ ಗಾಯ। ಗಿರಿಜೋಂ ಮೇ ಭೀ ತುಮ್ಹಾರೀ ಛಾಯಾ। ಏಕ್ ಹೋತುಮ್ ಏಕ್ ಹೋ॥3॥

ಹರ್ ದೇಶ್ ಮೇ ತೂ (ಹಿಂದಿ) **ರಾಗ: ಅಭೇರಿ**

ಹರ ದೇಶ್ ಮೇ ತೂ ಹರ ವೇಷ್ ಮೇ ತೂ। ತೇರೆ ನಾಮ ಅನೇಕ ತೂ ಏಕ ಹೀ ಹೈ॥ ತೇರೀ ರಂಗಭೂಮಿ ಯಹ ವಿಶ್ವಭರಾ। ಹರ ಖೇಲ ಮೇ ಮೇಲ ಮೇ ತೂಹೀ ಹೈ॥ಹರ॥ ಸಾಗರಸೇ ಉಠಾ ಬಾದಲ ಬನಕೇ। ಬಾದಲ್ ಸೇ ಫೂಟಾಜಲ್ ಹೋಕರ ಕೇ॥ ಫಿರ್ ನಹರ ಬನಾ ನದಿಯಾ ಗಹ ರೀ। ತೇರೇ ಭಿನ್ನ ಪ್ರಕಾರ ತೂ ಏಕ್‌ಹೀ ಹೈ॥ಹರ॥ ಛಿಂಟೇಸೆ ಭೀ ಅಣುಪರಮಾಣು ಬನಾ। ಸಬ ಜೀವ ಜಗತ ಕಾ ರೂಪ ಲಿಯಾ॥ ಕಹೀ ಪರ್ವತ ವೃಕ್ಷ ವಿಶಾಲ ಬನಾ। ಸೌಂದರ್ಯ ತೇರಾ ತೂ ಏಕ ಹೀ ಹೈ॥ಹರ॥ ಯಹದಿವ್ಯ ದಿಖಾಯಾ ಹೈ ಜಿಸನೇ। ವಹ ಹೈ ಗುರುದೇವ ಕೀ ಪೂರ್ಣಕೃಪಾ॥ ತುಕಡಯಾ ಕಹೇ ಕೋಯಿ ಔರ್ ನ ದಿಖಾ॥ ಯಹ ಮೈ ಔರ್ ತೂ ಸಬ ಏಕ್ ಹೀ ಹೈ॥ಹರ॥

ಹೃದಯದರಮನೆಯಲ್ಲಿ ಭಕ್ತಿಭಾವದ **ರಾಗ: ಕಲ್ಯಾಣಿ**

ಹೃದಯದರಮನೆಯಲ್ಲಿ ಭಕ್ತಿ ಭಾವದ ಕುಸುಮ। ಅರಳಿ ನಿಂತಿಹುದಯ್ಯಾ ನಿನ್ನನ್ನೊಲಿಸೇ। ಎನ್ನಾತ್ಮದಾವೀಣೆ ಮಧುರ ಶ್ರುತಿಯೊಡಗೂಡಿ। ನಿನ್ನ ಲೀಲೆಯ ಸತತ ಹೊಗಳಿ ಹಾಡುತಿರೆ॥1॥ ಬಾಳ ಮರ್ಮವನರಿತು ಹೀನ ಸ್ವಾರ್ಥವ ತೊರೆದು। ದೈನ್ಯತೆಯಲೀದೇಹ ಮಣಿದು ಬೇಡುತಿರೇ। ಕಾಣದೀ ಹಣತೆಯಲಿ ಭಕ್ತಿದೀವಿಗೆ ಉರಿಸು। ಕರುಣೆ ತೈಲವ ನೀಡು ಸತತ ವೆಂದೂ॥2॥

ಹೇ ಭಗವಾನ್ ದಯಾಕೆ ಸಾಗರ್ (ಹಿಂದಿ) **ರಾಗ: ಹಿಂದೂಸ್ಥಾನಿಕಾಪಿ**

ಹೇ ಭಗವಾನ್ ದಯಾಕೆ ಸಾಗರ್ ಸಬಕೆ ಪಾಲನಹಾರೆ ಹೋ। ಮಾತ-ಪಿತಾ ಬಂಧು ಹಿತಕಾರಿ। ಸ್ವಾಮಿ-ಸಖಾ ಹಮಾರೇ ಹೋ। ಪ್ರಾಣದಾನ ದೇಕರ ತುಮ್ ಪ್ರಭುಜೀ, ಜಗಕಾ ಪಾಲನ ಕರತೆ ಹೋ। ಕರುಣಾ ಕಾ ಸುಖಸ್ರೋತ ಬಹಾಕರ್, ಸಾರೆ ಸಂಕಟ ಹರತೆ ಹೋ। ದೀನ ಬಂಧು ಹಮ್ ಛಾತ್ರ ಜನೋಂ ಕೊ ಧನ್ ಬಲ್ ಬುದ್ಧಿ ಪ್ರದಾನ್ ಕರೋ। ದೇಶಪ್ರೇಮಕೀ ಜ್ಯೋತಿ ಜಗಾದೊ। ಸಬಕೋ ಸಾಹಸ್ ದಾನಕರೋ। ದೀನ ನಾಥ ಯಹೀ ಹೈ ಬಿನತೀ ಕರುಣಾಕರ್ ಸ್ವೀಕಾರ್ ಕರೋ। ಶರಣ ಆಪಕೀ ಆಯೇ ಹೈ। ಹಮ ಹೇ ಪ್ರಭು, ಬೇಡಾ ಪಾರ್ ಕರೋ॥

ಹೇ ಭಗವಾನ್ ಮುಝೆ ದುನಿಯಾ (ಹಿಂದಿ) **ರಾಗ: ಕಾಪಿ**

ಹೇ ಭಗವಾನ್ ಮುಝೆ ದುನಿಯಾ ಕೀ ಸೇವಾಕಾ ವರದಾನ್ ದೋ। ದುಖಿಯೋಂ ಕಾ ದುಃಖ ಮಿಟಾ ಸಕೂಂ ಮೈ। ಐಸೀ ಶಕ್ತಿ ಮಹಾನ್ ದೋ॥1॥ ಜೋ ಆಂಸೂ ಸೆ ಭೀಗ್ ರಹೆ ಹೋ। ಉನ್ಹೆ ಹಸೀಕಿ ಚಾಹ್‌ದೂಂ। ಬಿನಾ ಸಹಾರೆ ಭಟಕ್ ರಹೆ ಜೊ। ಉನ್‌ಕೊ ಸುಖಕೀ ಬಾಹ ದೂಂ॥2॥ ಹೇ ಭಗವಾನ್ ಮುಝೆ ತುಮ್ ಅಪನೀ। ದಯಾದೃಷ್ಟಿ ಔರ್ ಭಕ್ತಿ ದೋ। ಸದಾ ಬುರಾಯಿ ಸೆ ಲಡಪಾವೂಂ। ಜೀವನ ಮೆ ಯಹ ಶಕ್ತಿ ದೋ॥3॥

ಹೇ ಭಗವಂತ ನಿನ್ನಲ್ಲಿದೋ **ರಾಗ: ಹಿಂದೂಸ್ಥಾನಿಕಾಪಿ**

ಹೇ ಭಗವಂತ ನಿನ್ನಲ್ಲಿದೋ ನನ್ನ ಪ್ರಾರ್ಥನೆ। ಶಕ್ತಿನೀಡೆನಗೆ ನನ್ನೆಲ್ಲ ಸುಖದುಃಖ ಸಹಿಸುವಷ್ಟು। ಶಕ್ತಿ ನೀಡೆನಗೆ॥ಪ॥ ನನ್ನ ಪ್ರೀತಿಯು ಸೇವೆಯಲ್ಲಿ ಫಲಕೊಡುವಂತೆ ಶ್ರಮಿಸಲು। ಶಕ್ತಿ ನೀಡೆನಗೆ ದೀನರೊಂದಿಗೆ ಬೆರೆತು ಬಾಳಲು। ಶಕ್ತಿ ನೀಡೆನಗೆ ಅನ್ಯಾಯದ ಶಕ್ತಿಗಳ ಎದುರು ಮೊಣಕಾಲೂರಿ ಪ್ರಾರ್ಥಿಸದೇ ಇರಲು॥1॥ ಶಕ್ತಿ ನೀಡೆನಗೆ ದೈನಂದಿನ ಜಂಜಡಗಳಿಂದ। ದೂರಾಗಿಸಿ ಮನಸ್ಸನ್ನು ಮುಗಿಲೆತ್ತರಕ್ಕೆ ಕೊಂಡೊಯ್ಯಲು। ಶಕ್ತಿ ನೀಡೆನಗೆ ನನ್ನೆಲ್ಲ ಶಕ್ತಿಗಳನ್ನು। “ನಿನ್ನದೇ” ಎಂದು ಪ್ರೀತಿಯಿಂದ ನಿನಗರ್ಪಿಸಲು॥2॥

ಹೇ ಭಗವಂತ ನೀನೆ ಪೊರೆ **ರಾಗ: ಮೋಹನ**

ಹೇ ಭಗವಂತ ನೀನೆ ಪೊರೆ ಜಗಕೆಲ್ಲ ನೀನೆ ದೊರೆ॥ಪ॥ ಜಡತೆಗೆ ಜೀವ ಜೀವಕ್ಕೆ ಭಾವ ಭಾವಕ್ಕೆ ಭಕ್ತಿ ಪೊರೆ। ಬಾಗಿಸಿ ಶಿರವ ಜೋಡಿಸಿ ಕರವ ಪಾಲಿಸು ಭಕ್ತಿ ದೊರೆ॥1॥ ಲೋಕವೆ ದೋಣಿ ನೀನೆ ಚುಕ್ಕಾಣಿ ಎಲ್ಲರ ಕಣ್ ತೆರೆಯೆ। ಸಾಗಿಸು ಪಥವ ಜೀವನ ರಥವ ಸಾಗಿಸು ಸಾಕು ಹೊರೆ॥2॥

ಹೈ ಮಾಲಿಕ್ ತೇರೇ ಬಂದೆ ಹಂ (ಹಿಂದಿ) **ರಾಗ: ಸಾವೇರಿ**

ಹೈ ಮಾಲಿಕ್ ತೇರೇ ಬಂದೆ ಹಂ। ಐಜೈಸೆ ಹೋ ಹಮಾರೆ ಕರಂ। ನೇಕಿ ಪರ್ ಚಲಿ ಜರ ಬಢತೇ ಚಲಿ। ಸಾಥಿ ಹಸತೆ ಹುಎ ನಿಕಲೆ ದಂ॥ ಎ ಅಂಧೇರಾ ಘನಾಸಾರಹಾ। ತೇರಾ ಇನ್ಸಾಫ್ ಘಬರಾ ರಹಾ। ಹೋ ಗಯಾ ಬೇಖಬರ್ ಕುಛನ ಆತಾ ನಜರ್ ಸುಖ್‌ಕಾ ಸೂರಜ್ ಚುಪತಾ ರಹಾ। ಹೈ ತೇರಿ ರೋಶನಿ ಮೇ ಜೋದಂ। ತೂ ಅಮಾವಸ್ ಕೊ ಕರದೆ ಪೂನಂ। ನೇಕಿ ಪರಚಲಿ ಬಢತೇ ಚಲಿ। ಸಾಥಿ ಹಸತೆ ಹುಎ ನಿಕಲೆ ದಂ॥ ಜಬ್ ಜುಲ್ಮೋಂಕಾ ಹೋಸಾಮನಾ। ತಬ್‌ತೂಹೀ ಹಮೆ ಥಾಮನಾ ವೊಬುರಾಯಿ ಕರೆ ಹಂಭಲಾಯೀ ಬಢೆ। ತೂಹಿ ಬದಲ್‌ತೇವೋ ಕಾಮನಾ ಬಢ್ ತುಝೆ ಪ್ಯಾರ್‌ಕಾ ಹರ್‌ಕದಂ। ಔರ್ ಮಿಠೆಬೈರಕಾ ಏಧರಂ। ನೇಕಿ ಪರಚಲಿ ಬಢತೇ ಚಲಿ ಸಾಥಿ ಹಸತೆ ಹುಎ ನಿಕಲೆ ದಂ॥